**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 07-04-2026:**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

159.ಆರೋಪಿತರು ದಿನಾಂಕ 16-1-1984ರಂದು ನಿರ್ವಾಹಕರಾಗಿ ಚನ್ನರಾಯಪಟ್ಟಣ ಕೆ ಎಸ್ ಆರ್ ಟಿ ಸಿ ಡಿಪ್ಪೋದಲ್ಲಿ ಕೆಲಸಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಇವರಿಗೆ 22-10-93 ರಂದು ಬಿಜಾಪುರ ಕೆ ಎಸ್ ಆರ್ ಟಿ ಸಿ ಡಿಪ್ಪೋಗೆ ವರ್ಗಾವಣೆಯಾಗಿದ್ದು ಇವರು 25-9-94 ರವರೆಗೆ ಕರ್ತವ್ಯಕ್ಕೆ ಗೈರುಹಾಜರಾಗಿರುತ್ತಾರೆ. ದಿನಾಂಕ 26-9-94ರಂದು ಆರೋಪಿತರು ಹಾಸನ ಕೆ ಎಸ್ ಆರ್ ಟಿ ಸಿ ಡಿಪ್ಪೋಗೆ ಬಂದು ವರದಿ ಮಾಡಿಕೊಂಡಿರುತ್ತಾರೆ. ಈ ಬಗ್ಗೆ ಕೆ ಎಸ್ ಆರ್ ಟಿ ಸಿ ಹಾಸನ ಇದರ ವಿಭಾಗೀಯ ನಿಯಂತ್ರಣಾಧಿಕಾರಿಗಳಿಂದ ಪಡೆದುಕೊಂಡ ಸೇವಾ ವಿವರದಲ್ಲಿ ನಮೂದನೆ ಇರುತ್ತದೆ. ಆ ದಾಖಲೆಯನ್ನು ಈಗ ನೋಡುತ್ತಿದ್ದು **ನಿಪಿ-226** ಎಂದು ಗುರುತಿಸಲಾಯಿತು. ನಿಪಿ-226ನ್ನು **ನಿಪಿ-227**ರ ಪತ್ರದೊಂದಿಗೆ ಸ್ವೀಕರಿಸಿರುತ್ತೇನೆ. ದಿನಾಂಕ 3-10-1994ರಂದು ವಿಭಾಗೀಯ ನಿಯಂತ್ರಣಾಧಿಕಾರಿಗಳು ಆರೋಪಿತರನ್ನು ಸೇವೆಯಿಂದ ವಜಾಗೊಳಿಸಿರುತ್ತಾರೆ. ಈ ಬಗ್ಗೆ ನಿಪಿ-16ರ ಪತ್ರದ ಜೊತೆಗೆ ಸದರಿ ಆದೇಶದ ಪ್ರತಿಯನ್ನು ಸ್ವೀಕರಿಸಿರುತ್ತೇನೆ. ಸದರಿ ಆದೇಶದ ಪ್ರತಿಯನ್ನು ಈಗ ನೋಡುತ್ತಿದ್ದು ನಿಪಿ-16(1) ಎಂದು ಗುರುತಿಸಲಾಯಿತು. ಆರೋಪಿತರು ಮತ್ತು ಅವರ ಪತ್ನಿ ಯ ಹೆಸರಿನಲ್ಲಿ ಆಸ್ತಿ ಖರೀದಿಸುವಾಗ ಮತ್ತು ಮಾರಾಟ ಮಾಡುವಾಗ ಅವರ ಸಕ್ಷಮ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆದಿರುವುದಿಲ್ಲವೆಂದು ನಿಪಿ-227ರ ಪತ್ರದ ಮೂಲಕ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿರುತ್ತಾರೆ.

160.ಈ ಎಲ್ಲಾ ತನಿಖೆಯಿಂದ ಆರೋಪಿತರು ಒಟ್ಟು 39,19,649-39 ರೂಪಾಯಿ ಆಸ್ತಿ ಹೊಂದಿದ್ದು ಇವರ ಖರ್ಚು 20,99,705.25ರೂ ಆಗಿರುತ್ತದೆ. ಒಟ್ಟು ಆಸ್ತಿ ಮತ್ತು ಖರ್ಚು ಸೇರಿ 60,19,354.64ರೂ ಆಗಿರುತ್ತದೆ. ಇವರ ನ್ಯಾಯಯುತವಾದ ಒಟ್ಟು ಆದಾಯ 27,80,827.99ರೂ ಆಗಿರುತ್ತದೆ. ಇವರ ಆಸ್ತಿ ಮತ್ತು ಖರ್ಚಿಸನಿಂದ ಆದಾಯವನ್ನು ಕಳೆದಾಗ ಇವರ ಅಕ್ರಮ ಆಸ್ತಿ 37,38,526.65ರೂ ಆಗಿರುತ್ತದೆ. ಈ ತನಿಖೆಯಿಂದ ಆರೋಪಿತರ ವಿರುದ್ಧ ಅಂತಿಮ ವರದಿತ ಯಾರು ಮಾಡಿ 5-4-11ರಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಪರ

ಮಹಾ ನಿರೀಕ್ಷಕರಿಗೆ ಸಮುಚಿತ ಮಾರ್ಗದಲ್ಲಿ ಕಳುಹಿಸಿರುತ್ತೇನೆ. ದಿಃ17-6-11 ರಂದು ಲೋಕಾಯುಕ್ತ ಪೊಲೀಸ್ ಅಪರ ಮಹಾ ನಿರೀಕ್ಷಕರು ಆರೋಪಿತರ ವಿರುದ್ಧ ದೋ.ಪಟ್ಟಿ ಸಲ್ಲಿಸಲು ಆದೇಶ ಮಾಡಿರುತ್ತಾರೆ. ಅದನ್ನು ಈಗ ನೋಡುತ್ತಿದ್ದು ನಿಪಿ-228 ಎಂದು ಗುರುತಿಸಲಾಯಿತು.

161.ದಿಃ30-6-11 ರಂದು ಆರೋಪಿತರ ವಿರುದ್ಧ ದೋ.ಪಟ್ಟಿ ತಯಾರಿಸಿ ಪರಿಶೀಲನೆಯ ಬಗ್ಗೆ ಲೋಕಾಯುಕ್ತ ಪೊಲೀಸ್ ಅಪರ ಮಹಾನಿರೀಕ್ಷಕರಿಗೆ ಕಳುಹಿಸಿರುತ್ತೇನೆ. ದಿನಾಂಕ 13-9-11 ರಂದು ಎಸ್ ಪಿ ಕರ್ನಾಟಕ ಲೋಕಾಯುಕ್ತ ಹಾಸನ ರವರು ದೋ.ಪಟ್ಟಿ ಪರಿಶೀಲಿಸಿ ದೊ.ಪಟ್ಟಿ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಜ್ಞಾಪನ ನೀಡಿರುತ್ತಾರೆ. ಅದನ್ನು ಈಗ ನೋಡುತ್ತಿದ್ದು **ನಿಪಿ-229** ಎಂದು ಗುರುತಿಸಲಾಯಿತು.

162.ದಿಃ16-9-11 ರಂದು ಆರೋಪಿತರ ವಿರುದ್ಧ ದೋ.ಪಟ್ಟಿ ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

(ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಪಾಟೀಸವಾಲನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**